# 19. ಕನ್ನಡಅಧ್ಯಯನ ವಿಭಾಗ

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿಕನ್ನಡಅಧ್ಯಯನ ವಿಭಾಗವು 2010ರಲ್ಲಿ ಸ್ಥಾಪನೆಗೊಂಡು, 2010–11ನೇ ಶೈಕ್ಷಣಿಕ ವರ್ಷದಿಂದಕನ್ನಡ ಎಂ.ಎ ಸ್ನಾತಕೋತ್ತರ ತರಗತಿಗಳನ್ನು ಆರಂಭಿಸುತ್ತದೆ.ಕನ್ನಡ ಎಂ.ಎ ತರಗತಿಯು ನಾಲ್ಕು ಸೆಮಿಸ್ಟರ್‌ಗಳ ಆಯ್ಕೆಯನ್ನಾಧರಿಸಿದ ಅಂಕ ಪದ್ಧತಿಯನ್ನು (ಸಿ.ಬಿ.ಸಿ.ಎಸ್) ಅಳವಡಿಸಿಕೊಂಡಿದೆ. ಪ್ರತಿ ಸೆಮಿಸ್ಟರ್‌ಗೆ 96 ಗಂಟೆಗಳ ಕಾಲ ಬೋಧನೆ ಮಾಡಲಾಗುತ್ತದೆ.ನಾಲ್ಕನೇ ಸೆಮಿಸ್ಟರ್‌ನಅವಧಿಯಲ್ಲಿ ವಿದ್ಯಾರ್ಥಿಗಳು ಕಿರು–ಸಂಶೋಧನಾ ಪ್ರಬಂಧದ ಪ್ರಾಯೋಗಿಕ ವರದಿಯನ್ನು ಸಲ್ಲಿಸಬೇಕು.ಜೆತೆಗೆ ವಿದ್ಯಾರ್ಥಿಗಳಿಗೆ ಗಣಕೀಕೃತಜ್ಞಾನವನ್ನು ನೀಡುವುದರಜೊತೆಗೆ, ಕನ್ನಡ ಸಾಹಿತ್ಯದ ಪ್ರಚಲಿತ ವಿದ್ಯಮಾನಗಳನ್ನು ಗಮನದಲ್ಲಿಟ್ಟುಕೊಂಡುಉದ್ಯೋಗಮುಖಿ ಹಾಗೂ ಸಮಾಜಮುಖಿಆಗುವಂತಹ ಪಠ್ಯಕ್ರಮವನ್ನುರೂಪಿಸಲಾಗಿದೆ. ಎಂ.ಎ ತರಗತಿಗಳಿಗೆ ಪ್ರವೇಶ ಪ್ರಕ್ರಿಯೆಗಳು ಪ್ರತಿ ವರ್ಷವುಜುಲೈ–ಆಗಸ್ಟ್ ತಿಂಗಳಲ್ಲಿ ಆರಂಭಗೊಳ್ಳುತ್ತವೆ. ಸ್ನಾತಕ ಪದವಿ ಪಡೆದ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಮತ್ತು ಭಾಷೆಗಳಲ್ಲಿ ವಿಶ್ವವಿದ್ಯಾನಿಲಯವು ನಿಗದಿಗೊಳಿಸುವ ಕನಿಷ್ಠ ಅಂಕಗಳನ್ನು ಪಡೆದುಕೊಂಡ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲುಅರ್ಹರಿರುತ್ತಾರೆ.

ಡಾ॥ ಕೆ.ಬಿ.ರಂಗಪ್ಪ ವಿಭಾಗದ ಸಂಯೋಜನಾಧಿಕಾರಿ. ಆರುಅತಿಥಿಉಪನ್ಯಾಸಕರು ಬೋಧನಾಕಾರ್ಯ ನಿರ್ವಹಿಸುತ್ತಿದ್ದಾರೆ.ನಿರಂತರ ಬೋಧನಾ ಚಟುವಟಿಕೆಗಳ ಮಧ್ಯದಲ್ಲಿಯೂ, ವಿದ್ಯಾರ್ಥಿಗಳಿಗೆ ಕಥೆ, ಕವನ, ನಾಟಕ ಮುಂತಾದ ಸೃಜನಾತ್ಮಕ ಸಾಹಿತ್ಯಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಲಾಗುತ್ತದೆ.ವಿದ್ಯಾರ್ಥಿಗಳಿಗೆ ಹೆಚ್ಚಿನಜ್ಞಾನ ಮತ್ತುಕೌಶಲ್ಯವನ್ನು ಬೆಳೆಸುವಲ್ಲಿ ವಿಷಯ ಪರಿಣಿತರಿಂದ ವಿಶೇಷ ಉಪನ್ಯಾಸ, ಸೆಮಿನಾರ್, ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.ಕನ್ನಡಅಧ್ಯಯನ ವಿಭಾಗವುಅವಶ್ಯಕವಾದ ಮೂಲ ಸೌಕರ್ಯಗಳಾದ ಬೋಧನಾಕೊಠಡಿ, ಅಧ್ಯಾಪಕರಕೊಠಡಿ, ಕಛೇರಿ ಹಾಗೋ ಕೇಂದ್ರಗ್ರಂಥಾಲಯದಜೊತೆಗೆ ವಿಭಾಗದಆಂತರಿಕಗ್ರಂಥಾಲಯವನ್ನು ಹೊಂದಿದೆ.ಆಂತರಿಕಗ್ರಂಥಾಲಯವುಉತ್ತಮವಾದ ನಾಲ್ಕು ನೂರು ಪುಸ್ತಕಗಳನ್ನು ಹೊಂದಿವೆ. ಜೊತೆಗೆಕೇಂದ್ರೀಕೃತಗಣಕಯಂತ್ರ ಪ್ರಯೋಗಾಲಯ ಸ್ಯವಸ್ಥೆಯಿದೆ.ಈ ಎಲ್ಲಾ ಸಾಮಾನ್ಯ ಸೌಲಭ್ಯಗಳ ಜೊತೆಗೆ ಶೈಕ್ಷಣಿಕ ಚಟುವಟಿಕೆಗಳ ಪ್ರಾತ್ಯಕ್ಷಿಕೆಗಾಗಿ ಸಭಾಂಗಣವಿದೆ.

ಪ್ರಾಧ್ಯಾಪಕರು:

1. ಡಾ॥ ಕೆ.ಬಿ.ರಂಗಪ್ಪ– ವಿಭಾಗದ ಸಂಯೋಜನಾಧಿಕಾರಿ
2. ಅತಿಥಿಉಪನ್ಯಾಸಕರು – 6